Gadag	1	68.5	28
Gulbarga	10	9279.45	3165
Hassan	2	2096.21	1205
Haveri	2	2005	1077
Kolar	2	288.01	3830
Koppal	5	1292.68	1901
Mandya	1	92.42	1025
Many Districts	2	11340	2770
Mysore	7	1794.76	34030
Raichur	3	12126.4	9524
Ramanagara	6	1204.68	5371
Shimoga	2	1003.94	1205
Tumkur	3	1990	3500
Udupi	2	1530	239
Uttara Kannada	2	7600	715
Total	**126**	**295503.6**	**595453**

ಸಿಂಧನೂರಿನಲ್ಲಿ ಸ್ಟೇಡಿಯಂ ಕಾಮಗಾರಿ ಅಪೂರ್ಣವಾಗಿರುವ ಬಗ್ಗೆ

54 (182) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸ್ಟೇಡಿಯಂ ಕಾಮಗಾರಿಯು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಸ್ಟೇಡಿಯಂ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತ ಎಷ್ಟು (ವಿವರ ನೀಡುವುದು);

ಈ) ಈ ಸ್ಟೇಡಿಯಂ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಇನ್ನು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವುದೆ;

ಉ) ಹಾಗಿದ್ದಲ್ಲಿ, ಎಂದು ಮತ್ತು ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) :

ಅ) ಹೌದು.

ಆ) 12ನೇ ಹಣಕಾಸು ಆಯೋಗದಿಂದ 2006–07ನೇ ಸಾಲಿನಲ್ಲಿ ರೂ.44.45 ಲಕ್ಷಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಿ 3 ಕಂತುಗಳಲ್ಲಿ ಬಿಡುಗಡೆ ಮಾಡಿದೆ. ಕಾಮಗಾರಿ ಪ್ರಗತಿಯಲ್ಲಿದ್ದು, ಅಂತಿಮ ಹಂತ ತಲುಪಿರುತ್ತದೆ.

ಇ)

1.	ನೆಲಸಮತಟ್ಟು ಕಾಮಗಾರಿ ರೂ.	12.95 ಲಕ್ಷಗಳು
2.	200 ಮೀ. ಓಟದ ಟ್ರಾಕ್ ನಿರ್ಮಾಣ ಕಾಮಗಾರಿ, ವಾಲಿಬಾಲ್ ಮತ್ತು ಲಾಂಗ್ ಜಂಪ್ ಅಂಕಣ ರೂ.	1.50 ಲಕ್ಷಗಳು
3.	ಪೆವಿಲಿಯನ್ ಕಟ್ಟಡ ಕಾಮಗಾರಿ	23.00 ಲಕ್ಷಗಳು
4.	ಕಾಂಪೌಂಡ್ ಗೋಡೆ ನಿರ್ಮಾಣ	7.00 ಲಕ್ಷಗಳು
	ಒಟ್ಟು ರೂ.	**44.45 ಲಕ್ಷಗಳು**

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಹೈದರಾಬಾದ್ – ಕರ್ನಾಟಕ ಅಭಿವೃದ್ಧಿ ಮಂಡಳಿಯ ಅನುದಾನದ ಬಗ್ಗೆ

55 (183) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರ ನಿಗದಿಪಡಿಸಿದ್ದ ಮತ್ತು ಬಿಡುಗಡೆ